ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 388 ಗ್ರಾಪಂಅ 2016(ಪಿ1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 13.04.2016

# ಸುತ್ತೋಲೆ

ವಿಷಯ : ದಿನಾಂಕ:14-04-2016ರಿಂದ ದಿನಾಂಕ:24-04-2016ರ ಅವಧಿಯಲ್ಲಿ ಆಯೋಜಿಸಲಾಗುವ ಗ್ರಾಮ ಸಭೆಗಳಲ್ಲಿ ಚರ್ಚಿಸಬೇಕಾದ ವಿಷಯ ಸೂಚಿಗಳನ್ನು ಗೊತ್ತುಪಡಿಸುವ ಕುರಿತು

ಗ್ರಾಮ ಉದಯಿ ಸೇ ಭಾರತ್ ಉದಯ್ ಅಭಿಯಾನ, ರಾಷ್ಟ್ರೀಯ ಸಾಮರಸ್ಯ ದಿವಸ್ ಮತ್ತು ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ್ ಆಚರಣೆಗಾಗಿ ದಿನಾಂಕ:14-04-2016ರಿಂದ ದಿನಾಂಕ:24-04-2016ರ ಅವಧಿಯಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಆಯೋಜಿಸಲಾಗಿರುವ ಗ್ರಾಮ ಸಭೆಗಳಲ್ಲಿ ಚರ್ಚಿಸಬೇಕಾದ ವಿಷಯಸೂಚಿಗಳನ್ನು ಗೊತ್ತುಪಡಿಸಿ ವಿಷಯವಾರು ಸಮಯ ನಿಗಧಿಪಡಿಸುವಂತೆ ದಿನಾಂಕ:12-04-2016ರಂದು ನಡೆದ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿನ ಸಭೆಯಲ್ಲಿ ನಿರ್ದೇಶನಗಳನ್ನು ನೀಡಲಾಗಿದೆ. ಅದರಂತೆ, ದಿನಾಂಕ:14-04-2016ರಿಂದ ದಿನಾಂಕ:24-04-2016ರ ಅವಧಿಯಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಆಯೋಜಿಸಲಾಗಿರುವ ಗ್ರಾಮ ಸಭೆಗಳಲ್ಲಿ ಚರ್ಚಿಸಬೇಕಾದ ವಿಷಯಸೂಚಿಗಳನ್ನು ಸಮಯ ಸಹಿತ ಗೊತ್ತುಪಡಿಸಿ ಆದೇಶಿಸಲಾಗಿದೆ. ಗೊತ್ತುಪಡಿಸಿರುವ ವಿಷಯಸೂಚಿ ಅನುಸಾರ ಗ್ರಾಮ ಸಭೆಗಳಲ್ಲಿ ಚರ್ಚೆಗಳನ್ನು ಕೈಗೆತ್ತಿಕೊಂಡು ಸಭೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಯಶಸ್ವಿಗೊಳಿಸುವಂತೆ ಸಂಬಂಧಿಸಿದ ಎಲ್ಲರಿಗೂ ಈ ಮೂಲಕ ಸೂಚಿಸಲಾಗಿದೆ.

| ಕ್ರ.ಸಂ. | ಸಮಯ | ವಿಷಯ ಸೂಚಿಗಳು |
|---|---|---|
| 1 | ಬೆಳಿಗ್ಗೆ 09.00 ರಿಂದ 10.00 | **ಸಾಮಾಜಿಕ ನ್ಯಾಯ/ಸಾಮಾಜಿಕ ಸಾಮರಸ್ಯ :** |
| | | ✓ ಸಾಮಾಜಿಕ ಸಾಮರಸ್ಯವನ್ನು ಕಾಪಾಡುವ ಪ್ರತಿಜ್ಞಾವಿಧಿಯನ್ನು ಸ್ವೀಕರಿಸುವುದು |
| | | ✓ ಡಾ|| ಬಿ.ಆರ್.ಅಂಬೇಡ್ಕರ್ ರವರ ವಿಚಾರ ಧಾರೆಗಳನ್ನು ಪ್ರಚುರಪಡಿಸಿ ಸರ್ವರಿಗೂ ಸಮಾನ ಅವಕಾಶಗಳ ಬಗ್ಗೆ ಚರ್ಚಿಸುವುದು. |
| | | ✓ ಕೋಮು ಸಾಮರಸ್ಯ ಮತ್ತು ಸಹಿಷ್ಣುತೆ ಕಾಯ್ದುಕೊಳ್ಳುವ ಬಗ್ಗೆ ಬದ್ಧತೆಯನ್ನು ಪ್ರದರ್ಶಿಸುವುದು |
| | | ✓ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರ ಕಲ್ಯಾಣಕ್ಕಾಗಿ ಗ್ರಾಮ ಪಂಚಾಯತಿಯಿಂದ ನೀಡಲಾಗುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸುವುದು. |
| | | ✓ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರ ಕಲ್ಯಾಣಕ್ಕಾಗಿ ಇತರೆ ಇಲಾಖೆಗಳಿಂದ ನೀಡಲಾಗುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸುವುದು. |
| | | ✓ ಸಾಮಾಜಿಕ ಕಾರ್ಯಕ್ರಮಗಳ ಅನುಷ್ಠಾನದ ಮೂಲಕ ಮೂಲಕ ಸಮ ಸಮಾಜವನ್ನು ನಿರ್ಮಾಣ ಮಾಡಲು ಸ್ವಸಹಾಯ ಸಂಘಗಳು, ಮಹಿಳಾ ಸಂಘಗಳು, ಯುವಕ ಸಂಘಗಳು ಮತ್ತು ಇತರೆ ಸಂಘಟನೆಗಳಿಗೆ ಪ್ರೇರೇಪಿಸುವುದು. |
| | | ✓ ಶೋಷಿತ ವರ್ಗದವರು, ಅಂಗವಿಕಲರು, ಹಿರಿಯ ನಾಗರೀಕರು, ವಸತಿ ರಹಿತರು, ಅಲೆಮಾರಿಗಳು, ಆರ್ಥಿಕವಾಗಿ ಹಿಂದುಳಿದವರಿಗೆ ಗ್ರಾಮ ಪಂಚಾಯತಿ ಹಾಗೂ ಇತರೆ ಇಲಾಖೆಗಳ ಯೋಜನೆಗಳ ಬಗ್ಗೆ ಅರಿವು ಮೂಡಿಸಿ ಆರ್ಥಿಕವಾಗಿ ಸಬಲರಾಗುವಲ್ಲಿ ಶ್ರಮಿಸುವುದು. |

| | | |
|---|---|---|
| | | ✓ ಮದ್ಯಪಾನ, ಮಾದಕ ದ್ರವ್ಯಗಳು, ಇತರೆ ದುಶ್ಚಟ ಮುಕ್ತ ಸಮಾಜ ನಿರ್ಮಾಣ ಮಾಡುವಲ್ಲಿ ಸಂಕಲ್ಪ ಮಾಡುವುದು. |
| | | ✓ ಬಾಲ ಕಾರ್ಮಿಕ, ಬಾಲ್ಯ ವಿವಾಹ, ಜೀತಪದ್ಧತಿ, ಇನ್ನಿತರೆ ಸಾಮಾಜಿಕ ಪಿಡುಗುಗಳು ಹಾಗೂ ಮೌಢ್ಯಗಳ ಆಚರಣೆಯನ್ನು ಹೋಗಲಾಡಿಸುವಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅರಿವು ಮೂಡಿಸುವುದು. |
| 2 | ಬೆಳಿಗ್ಗೆ 10.00 ರಿಂದ 11.00 | **ಕೃಷಿ, ಆರೋಗ್ಯ ಮತ್ತು ಶಿಕ್ಷಣ :** |
| | | ✓ ರೈತರ ಆತ್ಮಹತ್ಯೆ ತಡೆಯುವಲ್ಲಿ ಸಮಾಜದ ಪಾತ್ರ. |
| | | ✓ ರೈತರಲ್ಲಿ ಆತ್ಮಸ್ಥೈರ್ಯ ಹೆಚ್ಚಿಸುವುದು. |
| | | ✓ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಯೋಜನೆಗಳು/ಸೌಲಭ್ಯಗಳ (ರೈತ ಸಂಪರ್ಕ ಕೇಂದ್ರಗಳು, ಸಹಾಯಧನ, ಭಿತ್ತನೆಬೀಜಗಳು, ಗಂಗಾ ಕಲ್ಯಾಣ ಯೋಜನೆ, ರಸಗೊಬ್ಬರ, ಜೈವಿಕ ಅನಿಲ, ಸಾವಯವ ಕೃಷಿ) ಬಗ್ಗೆ ಅರಿವು ಮೂಡಿಸುವುದು. |
| | | ✓ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕೃಷಿ ವಿಮಾ ಹಾಗೂ ಬೆಳೆ ವಿಮಾ ಯೋಜನೆಗಳು. ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆ, ರಾಷ್ಟ್ರೀಯ ಕೃಷಿ ವಿಮಾ ಯೋಜನೆ, ಕೃಷಿ ಭಾಗ್ಯ, ಭೂಚೇತನ, ಕೃಷಿ ಅಭಿಯಾನ, ಸಮ, ಆತ್ಮ, ಸಾವಯವ ಕೃಷಿ ಹಾಗೂ ಇತರೆ ಕೃಷಿ ಯೋಜನೆಗಳು |
| | | ✓ ವೈಜ್ಞಾನಿಕ ಕೃಷಿಯ ಬಗ್ಗೆ ರೈತರಲ್ಲಿ ಅರಿವು ಮೂಡಿಸುವುದು. |
| | | ✓ ಮ.ಗಾಂ.ರಾ.ಗ್ರಾ.ಉ.ಖಾತ್ರಿ ಯೋಜನೆಯಿಂದ ಕೃಷಿ ಮತ್ತು ತೋಟಗಾರಿಕೆ ಕಾಮಗಾರಿಗಳ ಬಗ್ಗೆ ಅರಿವು ಮೂಡಿಸುವುದು. |
| | | ✓ ಆರೋಗ್ಯ ಇಲಾಖೆಯಿಂದ ಆಯೋಜಿಸಲಾಗುವ ಆರೋಗ್ಯ ಶಿಬಿರಗಳು, ಇಲಾಖೆಯ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವುದು. |
| | | ✓ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ವಹಿಸುವ ಮುಂಜಾಗ್ರತಾ ಕ್ರಮಗಳು. |
| | | ✓ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ದೊರಕುವ ಸ್ಕಾಲರ್‌ಶಿಪ್, ವಿದ್ಯಾರ್ಥಿ ನಿಲಯದ ಸೌಲಭ್ಯಗಳು ಇತ್ಯಾದಿ ಬಗ್ಗೆ ಅರಿವು ಮೂಡಿಸುವುದು. |
| | | ✓ ವಯಸ್ಕರ ಶಿಕ್ಷಣ, ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಸೇರಿಸುವುದು, ಇತ್ಯಾದಿ ಬಗ್ಗೆ ಚರ್ಚಿಸುವುದು. |
| | | ✓ ಮಕ್ಕಳು, ಗರ್ಭಿಣಿಯರಿಗೆ ದೊರಕುವ ಯೋಜನೆಗಳು ಹಾಗೂ ಮುಂಜಾಗ್ರತಾ ಕ್ರಮಗಳು. |
| 3 | ಬೆಳಿಗ್ಗೆ 11.00 ರಿಂದ 01.00 | **ಗ್ರಾಮ ಪಂಚಾಯತಿಯಿಂದ ಸಾರ್ವಜನಿಕರಿಗೆ ದೊರಕುವ ಸೌಲಭ್ಯಗಳು ಹಾಗೂ ಯೋಜನೆಗಳು :** |
| | | ✓ ಗ್ರಾಮ ಪಂಚಾಯತಿ ಅನುದಾನಗಳ ಜಮಾಖರ್ಚಿನ ವಿವರ |
| | | ✓ ಗ್ರಾಮ ಪಂಚಾಯತಿಯ ವಾರ್ಷಿಕ ಯೋಜನೆಯ ಬಗ್ಗೆ ಚರ್ಚೆ. |
| | | ✓ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲಾದ ಕಾಮಗಾರಿಗಳ ಬಗ್ಗೆ ಚರ್ಚೆ |
| | | ✓ ಜಮಾಬಂಧಿ, ಸಾಮಾಜಿಕ ಲೆಕ್ಕಪರಿಶೋಧನೆ ಟಿಪ್ಪಣೀ ಮತ್ತು ಅದರ ಮೇಲಿನ ಉತ್ತರ ಪರಿಶೀಲನೆ. |
| | | ✓ ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆಯ ಕಾಮಗಾರಿಗಳ ಬಗ್ಗೆ ಅರಿವು ಮೂಡಿಸುವುದು. |
| | | ✓ ನೀರು ಸಂರಕ್ಷಣೆ, ನೀರು ಕೊಯ್ಲು, ಸಾಂಪ್ರದಾಯಿಕ ನೀರಿನ ಮೂಲಗಳ ಪುನಶ್ಚೇತನ ಕಾಮಗಾರಿಗಳ ಬಗ್ಗೆ ಚರ್ಚೆ |
| | | ✓ ಅರಣ್ಯೀಕರಣ ಸೇರಿದಂತೆ ಬರಗಾಲ ತಡೆಗಟ್ಟುವ ಯೋಜನೆಯ ಬಗ್ಗೆ ಚರ್ಚೆ |
| | | ✓ ಸಣ್ಣ, ಅತಿಸಣ್ಣ ನೀರಾವರಿ, ಕೃಷಿ ನೀರಾವರಿ ಕಾಲುವೆ ನಿರ್ಮಾಣ ಕಾಮಗಾರಿಗಳ ಚರ್ಚೆ. |
| | | ✓ ಜಮೀನು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚೆ. |
| | | ✓ ನೆರೆ ನಿಯಂತ್ರಣ ಮತ್ತು ತಡೆ ಕಾಮಗಾರಿಗಳ ಬಗ್ಗೆ ಚರ್ಚೆ. |
| | | ✓ ಗ್ರಾಮೀಣ ಪ್ರದೇಶದಲ್ಲಿ ಸರ್ವಋತು ರಸ್ತೆ ಕಾಮಗಾರಿಬಗಳ ಬಗ್ಗೆ ಚರ್ಚೆ. |
| | | ✓ ಬಾರತ ನಿರ್ಮಾಣ ರಾಜೀವ ಗಾಂಧಿ ಸೇವಾ ಕೇಂದ್ರ ಕಾಮಗಾರಿಗಳ ಬಗ್ಗೆ ಚರ್ಚೆ |

| | | |
|---|---|---|
| | | ✓ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಪಶುಸಂಗೋಪನೆ ಇಲಾಖೆಯ ಕಾಮಗಾರಿಗಳ ಬಗ್ಗೆ ಚರ್ಚೆ. |
| | | ✓ ಗ್ರಾಮೀಣ ಸ್ವಚ್ಛತೆ, ವೈಯಕ್ತಿಕ, ಶಾಲಾ, ಅಂಗನವಾಡಿ, ಸಮುದಾಯ ಶೌಚಾಲಯ ನಿರ್ಮಾಣ ಕಾಮಗಾರಿಗಳ ಬಗ್ಗೆ ಚರ್ಚೆ. |
| | | ✓ ಸಂಸದರು ಹಾಗೂ ಶಾಸಕರ ಪ್ರದೇಶಾಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚೆ. |
| | | ✓ ಗ್ರಾಮೀಣ ನೀರು ಸರಬರಾಜು ಯೋಜನಾ ಕಾಮಗಾರಿಗಳ ಬಗ್ಗೆ ಚರ್ಚೆ. |
| | | ✓ ಎನ್.ಆರ್.ಎಲ್.ಎಂ. ಯೋಜನೆ |
| | | ✓ ಸ್ವಚ್ಛ ಭಾರತ್ ಅಭಿಯಾನ |
| | | ✓ ಗ್ರಾಮೀಣ ಪ್ರದೇಶದಲ್ಲಿ ನಬಾರ್ಡ ರಸ್ತೆ ಕಾಮಗಾರಿಗಲ ಬಗ್ಗೆ ಚರ್ಚೆ |
| | | ✓ ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆಯ ಕಾಮಗಾರಿ ಚರ್ಚೆ |
| | | ✓ 'ನಮ್ಮ ಗ್ರಾಮ ನಮ್ಮ ರಸ್ತೆ' ಯೋಜನೆಯ ಕಾಮಗಾರಿ ಬಗ್ಗೆ ಚರ್ಚೆ |
| 4 | ಮಧ್ಯಾಹ್ನ 02.00 ರಿಂದ 03.00 | **ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ (ಜಿ.ಪಿ.ಡಿ.ಪಿ.) ತಯಾರಿಕೆ :** |
| 5 | ಮಧ್ಯಾಹ್ನ 03.00 ರಿಂದ 04.00 | **ರಾಷ್ಟೀಯ ಪಂಚಾಯತ್ ರಾಜ್ ದಿವಸ್ ಆಚರಣೆಯ ಹಿನ್ನೆಲೆ ಮತ್ತು ಮಹತ್ವ :** |
| | | ✓ ಭಾರತದ ಸಂವಿಧಾನಕ್ಕೆ ಮಾಡಲಾದ 73ನೇ ತಿದ್ದುಪಡಿ ಮತ್ತು ಅದು ಕಾಯ್ದೆಯಾಗಿ ಜಾರಿಗೆ ಬಂದ ದಿನ. |
| | | ✓ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಅಧಿಕಾರ ವಿಕೇಂದ್ರೀಕರಣ ಪರಿಕಲ್ಪನೆ ಜಾರಿ. |
| | | ✓ ಅಧಿಕಾರ ವಿಕೇಂದ್ರೀಕರಣ ಪರಿಕಲ್ಪನೆಯಡಿ ಪಂಚಾಯತ್ ಸಂಸ್ಥೆಗಳಿಗೆ ರಾಜ್ಯ ಸರ್ಕಾರವು ವ್ಯಾಪಕವಾಗಿ ವರ್ಗಾಯಿಸಿರುವ ಅಧಿಕಾರ, ಅಧಿಕಾರಿ ಮತ್ತು ಅನುದಾನಗಳ ಕುರಿತು. |
| 6 | ಸಂಜೆ 04.00 ರಿಂದ 05.00 | **ಸಾಂಸ್ಕೃತಿಕ ಚಟುವಟಿಕೆಗಳು, ವಸ್ತು ಪ್ರದರ್ಶನ ಮತ್ತು ಗ್ರಾಮೀಣ ಕ್ರೀಡಾ ಕೂಟಗಳ ಆಯೋಜನೆ** |
| | | ✓ ಶಾಲಾ ಮಕ್ಕಳಿಂದ ಚಿತ್ರ ಬಿಡಿಸುವಿಕೆ ಮತ್ತು ಚಿತ್ರಕಲಾ ಪ್ರದರ್ಶನ ಆಯೋಜನೆ |
| | | ✓ ಸಮುದಾಯ ಹಾಡುಗಾರಿಕೆ ಮತ್ತು ನೃತ್ಯ. |
| | | ✓ ಜಾನಪದ ಕಲಾ ತಂಡಗಳ ಮೂಲಕ ಸಾಂಸ್ಕೃತಿಕ ಚಟುವಟಿಕೆಗಳ ಆಯೋಜನೆ. |
| | | ✓ ಗ್ರಾಮೀಣ ಕ್ರೀಡಾ ಕೂಟಗಳ ಆಯೋಜನೆ. |

(ಟಿ.ವಿ.ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ :**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ರಾಜ್ಯದ ಎಲ್ಲಾ ಜಿಲ್ಲೆಗಳು.
2) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ರಾಜ್ಯದ ಎಲ್ಲಾ ತಾಲ್ಲೂಕುಗಳು.
3) ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು.
4) ಎಲ್ಲಾ ಆಯುಕ್ತರುಗಳು / ನಿರ್ದೇಶಕರುಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
5) ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ.
6) ಗಣಕ ಕೋಶ.
7) ಕಛೇರಿ/ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ :**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.